

ಮನೆಯನ್ನು ಭೇದಿಸಿತು. ಆಂಟಿ ಕಣ್ಣಿನಿಂದ ಹನಿಗಳು ಜಾರಿ ಹರಿದವು. ಅವಳು ತನ್ನ ಕಣ್ಣು ಬಿಡುವುದಕ್ಕೆ ಮೊದಲೇ ಅವಳ ಬದುಕು ಸೂರೆಯಾಗಿ ಹೋಯಿತು. ಅವಳು ಸುಮ್ಮನೆ ಪಿಳಪಿಳನೆ ಒಮ್ಮೆ ನೋಡಿದಳು. ಜನ ಸೇರಿದರು. ಯಾರೋ ಶವವನ್ನು ಹೊತ್ತು ತಂದರು. ಯಾರೋ ಶವಕ್ಕೆ ಕಫನ್ ತೊಡಿಸಿದರು.

ಮಾಚಗೋಡನಹಳ್ಳಿಯಿಂದ ನನ್ನ ಅಜ್ಜ ಶಾ ಅಲಿ ಸಾಹೇಬರು ಬಂದರು. ತಂಗಿಯ ಗಂಡನ ಅಂತ್ಯ ಹೀಗಾಗುವುದರೊಂದಿಗೆ ಅವರ ಎದುರಿಗೆ ದೊಡ್ಡ ಸವಾಲುಗಳಿದ್ದವು. ಒಬ್ಬ ತಂಗಿ ತೀರಿಹೋಗಿದ್ದಳು. ಆಕೆಯ ರೋಗಿಷ್ಟ ಮಗ ಅವರ ಆಶ್ರಯದಲ್ಲಿದ್ದ ಮತ್ತು ಆತ ಅವಿವಾಹಿತನಾಗಿದ್ದ. ಇನ್ನೊಬ್ಬ ತಂಗಿ ಜಮಾಲ್ ಬೀ ವಿಧವೆಯಾಗಿ ಮತ್ತೆ ಅವರನ್ನು ಆಶ್ರಯಿಸಿದ್ದರು. ಕೊನೆಯ ಮುದ್ದಿನ ತಂಗಿ ಹಾಫಿಜಾ ಹನ್ನೆರಡು ವರ್ಷದ ಬಾಲ ವಿಧವೆಯಾಗಿ ಅವರೆದುರಿಗೆ ಧುತ್ ಎಂದು ನಿಂತಿದ್ದಳು.

ಸಯ್ಯದ್ ಗಫಾರನ ಅಂತಿಮ ಸಂಸ್ಕಾರವಾಯಿತು. ಎಲ್ಲರೂ ಅತ್ತು ಕಣ್ಣೀರಕೋಡಿಯನ್ನೇ ಹರಿಸಿದರು. ಹಾಫಿಜಾ ಕೂಡ ಅತ್ತಳು. ಯಾಕೆ ಎಂದು ಅವಳಿಗೆ ಅರಿವಾಗಲಿಲ್ಲ. ನನ್ನ ನಾನಾ ಸಾಹೇಬರು ಶಾ ಅಲಿ ಸಾಹೇಬರಿಗೆ ಹೇಳಿದರು – 'ಹಾಫಿಜಾ ನಮ್ಮ ಮನೆಯ ಮಗಳು. ಇಲ್ಲಿಯೇ ಇರಲಿ'.

ಮೊದಲೇ ಬೇಕಾದಷ್ಟು ಹೊರೆಗಳನ್ನು ಹೊತ್ತಿದ್ದ ಶಾ ಅಲಿ ಸಾಹೇಬರು ಹಾಫಿಜಾಳನ್ನು ತಮ್ಮ ಹಳ್ಳಿಗೆ ಕರೆತರಲು ಧೈರ್ಯ ಸಾಲದೆ ಹಾಸನ ನಗರದಲ್ಲಿ ಅತ್ತೆ ಮನೆಯಲ್ಲೇ ಬಿಟ್ಟರು. ಹಾಫಿಜಾಳಂತಹ ಮೃದು ಬಾಲೆ, ಬಾಳಿನ ಎಡರು ತೊಡರುಗಳನ್ನು ಎದುರಿಸಿ ಪಕ್ವ ಮನಸ್ಸಿನ ಬಲಿಷ್ಠ ಹೆಣ್ಣು ಮಗಳಾಗುವವಳೆಂದು ಅಂದು ಯಾರೂ ನಿರೀಕ್ಷಿಸಿರಲಿಲ್ಲ. ತವರು ಮನೆ ಮತ್ತು ಪತಿಗೃಹದ ನಡುವೆ ಸ್ನೇಹದ ಕೊಂಡಿಯಾಗುವವಳೆಂದು ಕೂಡಾ ನಿರೀಕ್ಷಿಸಿರಲಿಲ್ಲ. ಸ್ವತಃ ತಾಯಿಯಾಗದಿದ್ದರೂ ಭಾವನಾದ ಹಯಾತ ಸಾಹೇಬರ ಅನಾಥ ಮಕ್ಕಳಿಗೆ ತಾಯಿಯಾಗುವಳೆಂದು ನಿರೀಕ್ಷಿಸಿರಲಿಲ್ಲ. ಆಕೆ ಹಾಸನದಲ್ಲಿಯೇ ಪತಿಗೃಹದಲ್ಲಿ ಉಳಿದಳು. ತನ್ನ ಅಣ್ಣನಾದ ಶಾ ಅಲಿ ಸಾಹೇಬರ ಮಗನಾದ ನನ್ನ ತಂದೆ ಮತ್ತು ತನ್ನ ಭಾವನ ಮಗಳಾದ ಅಕ್ತರ ಬಾನುವಿನ ವೈವಾಹಿಕ ಜೀವನಕ್ಕೆ ಆಸರೆಯಾಗಿ ಅವರಿಬ್ಬರ ಸಂಸಾರಕ್ಕೆ ಕೊನೆಯವರೆಗೂ ಸೇವೆ ಗೈದು ಆ ಸೇವೆಯಲ್ಲಿಯೇ ಸಂತೃಪ್ತಿಯನ್ನು ಕಂಡುಕೊಂಡು ಆಕೆ ಕೊನೆಯವರೆಗೂ ಉಳಿದಳು. ಸ್ವತಃ – ಪತಿ ಎಂದರೇನು? ದಾಂಪತ್ಯ ಜೀವನವೇನೆಂದು ತಿಳಿಯದ ಆಕೆ ಎರಡು ಕುಟುಂಬದ ಅಸಂಖ್ಯ ಹೆಣ್ಣು ಮಕ್ಕಳ ದಾಂಪತ್ಯ ಜೀವನದ ದೀವಟಿಕೆಯಾದಳು. ಎಂದೂ ಗರ್ಭ ಧರಿಸದ ಆಕೆ ಅಸಂಖ್ಯ ಹೆಣ್ಣು ಮಕ್ಕಳ ಬಾಣಂತನವನ್ನು ಮಾಡಿದಳು. ಆ ಮಕ್ಕಳ ತಾಯಿಯಾದಳು. ನನಗೆ ಆಂಟಿಯಾದಳು ಮತ್ತು ನನ್ನ ಬದುಕಿನ ಬೆನ್ನೆಲುಬಾದಳು. ಆಕೆ ಬದುಕಿನಲ್ಲಿ ಏನು ಪಡೆದಳೋ ಏನು ಕಳೆದುಕೊಂಡಳೋ ಅದು ಲೆಕ್ಕಾಚಾರದ ವಿಷಯವಾಗಿರಲಿಲ್ಲ. ಪ್ರತಿಯೊಂದು ಎಳೆ ಕೂಡ ಬಾಂಧವ್ಯದ ತಂತುಗಳಾಗಿದ್ದವು. ಇಡೀ ಕುಟುಂಬದ ಪ್ರತಿಯೊಬ್ಬರು ಕೂಡ ಆಕೆಯನ್ನು ಪ್ರೀತಿಸಿದರು. ಅವಳ ವೈಯಕ್ತಿಕ ಸುಖದ ಸಾಮ್ರಾಜ್ಯ ಸೂರೆಯಾಗಿ ಹೋದರೂ ಅವಳು ಬೇರೆಯವರ ಜೀವನದಲ್ಲಿ ತನ್ನ ಒಡಕಲು ಬಿಂಬವನ್ನು ಪ್ರೇಮದಲ್ಲಿ ಕಂಡುಕೊಂಡಳು. ಆ ಬಿಂಬವನ್ನು ನಾಜೂಕಾಗಿ ಹೆಕ್ಕಿ ಅದರಿಂದ ತನ್ನ ಸಂಪೂರ್ಣ ಪ್ರೇಮಮಯಿ ರೂಪವನ್ನು ಕೊನೆಯವರೆಗೂ ಕಾಪಾಡಿಕೊಂಡಳು. ಇನ್ನೂ ಕಿಶೋರಾವಸ್ಥೆಯನ್ನು ತಲುಪುವುದಕ್ಕೆ ಮುನ್ನವೇ ಆಂಟಿಯ ಬದುಕು ಸೂರೆಯಾಗಿ ಹೋಗಿತ್ತು. ಆದರೂ ಆಕೆಯು ತನ್ನ ಸುದೀರ್ಘ ಜೀವನದುದ್ದಕ್ಕೂ ತವರುಮನೆ ಹಾಗೂ ಪತಿಯ ಮನೆಗೆ ಒಂದು ಕೊಂಡಿಯಾಗಿ ಉಳಿದಳು. ಹಾಗೂ ತನ್ನ ಅಸ್ತಿತ್ವಕ್ಕಾಗಿ ಎರಡೂ ಮನೆಯವರ ಜೊತೆಯಲ್ಲಿ ಹೋರಾಡಿ ತನ್ನ